**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಗೋವಿಂದ ರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ನಿಯಮ-72ರ ಅಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ ಒದಗಿಸುವ ಬಗ್ಗೆ.**

**ವಿಷಯ:** ಅಪರಾಧ ಕೃತ್ಯಗಳಲ್ಲಿ ತಮ್ಮದಲ್ಲದ ತಪ್ಪಿಗೆ ತೊಂದರೆಗೊಳಗಾದವರಿಗೆ ಪರಿಹಾರ ನೀಡಲು ರೂಪಿಸಲಾಗಿರುವ 'ಕರ್ನಾಟಕ ಸಂತ್ರಸ್ತ ಪರಿಹಾರ ಯೋಜನೆ' ಯು ಅನುದಾನದ ಕೊರತೆಯನ್ನು ಎದುರಿಸುತ್ತಿದೆ. 2023-24 ನೇ ಸಾಲಿನಲ್ಲಿನ 2023ರ ಡಿಸೆಂಬರ್‌ನಿಂದ 2024ರ ಮಾರ್ಚ್ ವರೆಗೆ 209 ಪ್ರಕರಣಗಳಿಗೆ 7.72 ಕೋಟಿ ರೂ. 2024 ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗಿನ 316 ಪ್ರಕರಣಗಳಿಗೆ 10.93 ಕೋಟಿ ರೂ. ಹಾಗೂ 2025ರ ಜನವರಿಯಿಂದ 2025 ರ ಮೇ ವರೆಗಿನ 268 ಪ್ರಕರಣಗಳಲ್ಲಿ 10.74 ಕೋಟಿ ಸೇರಿ ಇದೇ ರೀತಿಯಾಗಿ ಹಲವಾರು ಪ್ರಕರಣಗಳಿಗೆ ಒಟ್ಟು 45 ಕೋಟಿ ರೂ. ನೀಡಬೇಕಾಗಿರುವುದರ ಕುರಿತು.

**ಉತ್ತರ:** ಅಪರಾಧ ಕೃತ್ಯಗಳಲ್ಲಿ ತಮ್ಮದಲ್ಲದ ತಪ್ಪಿಗೆ ತೊಂದರೆಗೊಳಗಾದ ಸಂತ್ರಸ್ತರಿಗೆ ಸಂತ್ರಸ್ತ ಪರಿಹಾರ ಯೋಜನೆ -2011 ರಡಿ ಪರಿಹಾರ ನೀಡಲು ವಾರ್ಷಿಕವಾಗಿ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಅನುದಾನ ಮೀಸಲಿಟ್ಟು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಬಿಡುಗಡೆ ಮಾಡಲಾಗುತ್ತಿದೆ. ಅದರಂತೆ, ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾದ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ವಿನಿಯೋಗಿಸಲಾದ ಅನುದಾನದ ಮತ್ತು ಇತ್ಯರ್ಥಗೊಳಿಸಲಾದ ಪ್ರಕರಣಗಳ ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ.

| Year | No.of Cases | Decided Cases | Compensation to be paid ( in Rs) | BE (Budget provision) Rs. in lakhs | Expenditure as per KSLSA (Rs. in lakhs) | Amount available at the end of FY in Karnataka State legal service Authority (Rs. in lakhs) |
|---|---|---|---|---|---|---|
| 2023-24 (Dec-2023 to Mar 2024) | 209 | 209 | 7,72,92,500 | 1000.00 | 772.93 | 227.07 |
| 2024-25 (Apr-2024 to Dec-2024) | 316 | 316 | 10,93,05,000 | 1000.00 | 1093.05 | 134.02 |
| 2024-25 (Jan-2025 to May-2025 | 268 | 268 | 10,74,73,000 | 1000.00 | 1074.73 | 59.29 |

Scanned with OKEN Scanner

ಕರ್ನಾಟಕ ಸಂತ್ರಸ್ತ ಪರಿಹಾರ ಯೋಜನೆ-2011 ರಡಿ 2023-24 ನೇ ಸಾಲಿನಿಂದ ವಾರ್ಷಿಕ ರೂ.10.00 ಕೋಟಿಯಂತೆ ಸರ್ಕಾರದಿಂದ ಒದಗಿಸಲಾದ ಒಟ್ಟು ರೂ.30.00 ಕೋಟಿಗಳ ಅನುದಾನದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ರೂ.29.4 ಕೋಟಿಗಳ ವೆಚ್ಚ ಭರಿಸಲಾಗಿದ್ದು, ರೂ.60.00 ಲಕ್ಷಗಳ ಅನುದಾನ ಪ್ರಾಧಿಕಾರದ ಬಳಿ ಲಭ್ಯವಿರುತ್ತದೆ.

2025-26 ನೇ ಸಾಲಿನಲ್ಲಿ ರಾಜ್ಯ ಆಯವ್ಯಯದಲ್ಲಿ ಮೀಸಲಿಡಲಾದ ರೂ.10.00 ಕೋಟಿಗಳ ಪೈಕಿ ಮೊದಲ ತ್ರೈಮಾಸಿಕದಲ್ಲಿ ರೂ.2.5 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. 2025-26ನೇ ಸಾಲಿಗೆ ಕರ್ನಾಟಕ ಸಂತ್ರಸ್ತ ಪರಿಹಾರ ಯೋಜನೆ-2011 ರಡಿ ಹೆಚ್ಚುವರಿಯಾಗಿ ರೂ.35.00 ಕೋಟಿ ಅನುದಾನವನ್ನು ಒದಗಿಸಲು ಕೋರಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಸಲ್ಲಿಸಲಾದ ಪ್ರಸ್ತಾವನೆ ಕುರಿತಂತೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗಿದೆ.

2025-26ನೇ ಸಾಲಿಗೆ ಒಟ್ಟು 896 ಪ್ರಕರಣಗಲ್ಲಿ 448 ಪ್ರಕರಣಗಳು ಇತ್ಯರ್ಥವಾಗಬಹುದು ಎಂದು ನಿರೀಕ್ಷಿಸಲಾಗಿದ್ದು, ರೂ.16.00 ಕೋಟಿ ಅನುದಾನ ಅಗತ್ಯವಾಗಬಹುದು ಎಂದು ಆರ್ಥಿಕ ಇಲಾಖೆಯು ಅಂದಾಜಿಸಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಪ್ರಸ್ತುತ ಲಭ್ಯವಿರುವ ಅನುದಾನವನ್ನು ಹಾಗೂ 2025-26ನೇ ಸಾಲಿನಲ್ಲಿ ಒದಗಿಸಲಾಗುವ ಅನುದಾನವನ್ನು ಸಂಪೂರ್ಣವಾಗಿ ವಿನಿಯೋಗಿಸಿದ ನಂತರ ಹೆಚ್ಚುವರಿ ಅನುದಾನವನ್ನು ಒದಗಿಸಬಹುದಾಗಿದೆ ಎಂದು ತಿಳಿಸಿರುತ್ತದೆ.

ಅದರಂತೆ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಪ್ರಸ್ತುತ ಲಭ್ಯವಿರುವ ಅನುದಾನವನ್ನು ಹಾಗೂ 2025-26ನೇ ಸಾಲಿನಲ್ಲಿ ಒದಗಿಸಲಾಗುವ ಅನುದಾನವನ್ನು ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕಾಗಿ ವಿನಿಯೋಗಿಸಿದ ನಂತರ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲು ಸರ್ಕಾರದ ಪತ್ರ ಸಂಖ್ಯೆ: HD 68 PCB 2025, ದಿನಾಂಕ:01.08.2025ರಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ತಿಳಿಸಲಾಗಿದೆ(ಪ್ರತಿ ಲಗತ್ತಿಸಿದೆ).

ಸಂಖ್ಯೆ: HD 67 PCQ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

Scanned with OKEN Scanne

ಅನುಬಂಧ-2

ಕರ್ನಾಟಕ ಸರ್ಕಾರ

**ಸಂಖ್ಯೆ: HD/68/PCB/2025**

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಡಾ: ಬಿ. ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 01.08.2025

**ಇವರಿಂದ,**
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ( ಪಿ.ಸಿ.ಎ.ಎಸ್),
ಒಳಾಡಳಿತ ಇಲಾಖೆ,
ವಿಧಾನಸೌಧ,ಬೆಂಗಳೂರು.

**ಇವರಿಗೆ,**
ಸದಸ್ಯ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ,
ನ್ಯಾಯ ದೇಗುಲ, ಸಿದ್ದಯ್ಯ ರಸ್ತೆ, ಬೆಂಗಳೂರು.

01/8/25
ಕೊರಡಿಸಿದೆ
ಒಳಾಡಳಿತ ಮತ್ತು ಗೃಹ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ

**ಮಾನ್ಯರೇ,**

**ವಿಷಯ:** ಪರಿಹಾರಕ್ಕೆ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ಕುರಿತ.

**ಉಲ್ಲೇಖ:** ತಮ್ಮ ಕಚೇರಿ ಪತ್ರ ಸಂಖ್ಯೆ: KSLSA: 121/ಎಡಿಎಂ/2010,ದಿನಾಂಕ: 11.06.2025

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ 2025-26 ನೇ ಸಾಲಿಗೆ ಸಂತ್ರಸ್ತರ ಪರಿಹಾರ ಯೋಜನೆ-2011ರಡಿ ರೂ.35 ಕೋಟಿ ಅನುದಾನವನ್ನು ನೀಡುವಂತೆ ಕೋರಲಾಗಿದ್ದು, ಕರ್ನಾಟಕ ಸಂತ್ರಸ್ತರ ಪರಿಹಾರ ಯೋಜನೆಯಡಿ 2023-24ನೇ ಸಾಲಿನಿಂದ ವಾರ್ಷಿಕ ರೂ. 10.00 ಕೋಟಿಗಳ ಅನುದಾನವನ್ನು ಸರ್ಕಾರದಿಂದ ಒದಗಿಸಲಾಗುತ್ತಿದ್ದು, 2024-25 ನೇ ಸಾಲಿನವರೆಗೆ ಸರ್ಕಾರದಿಂದ ಒದಗಿಸಿದ ರೂ.30.00 ಕೋಟಿಗಳ ಅನುದಾನದಲ್ಲಿ ರೂ.29.40 ಕೋಟಿಗಳ ವೆಚ್ಚ ಮಾತ್ರ ಭರಿಸಲಾಗಿದ್ದು, ರೂ.60.00 ಲಕ್ಷಗಳ ಅನುದಾನ ಪ್ರಾಧಿಕಾರದ ಬಳಿ ಲಭ್ಯವಿರುತ್ತದೆ.

2025-26ನೇ ಸಾಲಿಗೆ ಒಟ್ಟು 896 ಪ್ರಕರಣಗಳಲ್ಲಿ 448 ಪ್ರಕರಣಗಳನ್ನು ಇತ್ಯರ್ಥಗೊಳಿಸಬಹುದಾಗಿದ್ದು, ಈ ಉದ್ದೇಶಕ್ಕೆ ರೂ.16.00 ಕೋಟಿ ಅನುದಾನ ಅಗತ್ಯವಾಗಬಹುದೆಂದು ಅಂದಾಜಿಸಲಾಗಿದೆ. ಇದರಲ್ಲಿ ಈಗಾಗಲೇ ರೂ.10.00 ಕೋಟಿಗಳ ಅನುದಾನವನ್ನು 2025-26ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ್ದು, ಸದರಿ ವೆಚ್ಚವನ್ನು ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ವಿನಿಯೋಗಿಸುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

S. Ambika 01/8/2025
**(ಎಸ್. ಅಂಬಿಕಾ)**
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ ( ಅಪರಾಧಗಳು)

1/8